ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಇತರ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE 20/3/2020

# ಮಧ್ಯಪ್ರದೇಶ: ಇಂದು ವಿಶ್ವಾಸಮತಕ್ಕೆ ಸುಪ್ರೀಂ ಆದೇಶ

## ಸಂಜೆ 5ರೊಳಗೆ ವಿಶ್ವಾಸಮತ ಪ್ರಕ್ರಿಯೆ ಮುಗಿಸಿ: ಸೂಚನೆ | ಕಾಂಗ್ರೆಸ್ ಸರ್ಕಾರದ ಆಳಿವು-ಉಳಿವು ನಿರ್ಧಾರ

ನವದೆಹಲಿ: ಜ್ಯೋತಿರಾದಿತ್ಯ ಸಿಂಧಿಯಾ ಬಣದ ಕಾಂಗ್ರೆಸ್ ಶಾಸಕರ ರಾಜೀನಾಮೆ ಕಾರಣ ಸೃಷ್ಟಿ ಯಾಗಿರುವ ಮಧ್ಯಪ್ರದೇಶದ ರಾಜಕೀಯ ಬಿಕ್ಕಟ್ಟಿಗೆ ಗುರುವಾರ ಮಹತ್ವದ ತಿರುವು ಲಭಿಸಿದೆ. ಶುಕ್ರವಾರ ಸಂಜೆ 5 ಗಂಟೆಯೊಳಗೆ ವಿಶ್ವಾಸಮತ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಸರ್ವೋಚ್ಚ ನ್ಯಾಯಾಲಯವು ವಿಧಾನಸಭೆ ಸಭಾಪತಿ ಎನ್.ಪಿ. ಪ್ರಜಾಪತಿ ಅವರಿಗೆ ಸೂಚಿಸಿದೆ. ಇದರಿಂದಾಗಿ ಕಮಲ್‌ನಾಥ್ ನೇತೃತ್ವದ ಕಾಂಗ್ರೆಸ್ ಸರ್ಕಾರದ ಆಳಿವು ಉಳಿವು ಶುಕ್ರವಾರ ನಿರ್ಧಾರವಾಗುವುದು ನಿಚ್ಚಳವಾಗಿದೆ.

ತಕ್ಷಣವೇ ವಿಶ್ವಾಸಮತ ಸಾಬೀತಿಗೆ ಕಮಲ್‌ನಾಥ್‌ಗೆ ಸೂಚಿಸಬೇಕು ಎಂದು ಬಿಜೆಪಿ ಮುಖಂಡ ಹಾಗೂ ರಾಜ್ಯದ ಮಾಜಿ ಮುಖ್ಯಮಂತ್ರಿ ಶಿವರಾಜ ಸಿಂಗ್ ಚೌಹಾಣ್ ಇತ್ತೀಚೆಗೆ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಸತತ 3 ದಿನ ಇದರ ವಿಚಾರಣೆ ನಡೆಸಿದ ನ್ಯಾ| ಡಿ.ವೈ. ಚಂದ್ರಚೂಡ್ ಹಾಗೂ ನ್ಯಾ| ಹೇಮಂತ್ ಗುಪ್ತಾ ಅವರ ಪೀಠ, 'ಶುಕ್ರವಾರ ಸ್ಪೀಕರ್ ಅವರು ವಿಶೇಷ ಅಧಿವೇಶನ ಕರೆದು ಸಂಜೆ 5ರೊಳಗೆ ವಿಶ್ವಾಸಮತ ಪ್ರಕ್ರಿಯೆ ಪೂರ್ಣಗೊಳಿಸಬೇಕು' ಎಂದು ಆದೇಶಿಸಿತು.

ಶಾಸಕತ್ವಕ್ಕೆ ರಾಜೀನಾಮೆ ನೀಡಿರುವ 16 ಕಾಂಗ್ರೆಸ್ ಶಾಸಕರು ಬೆಂಗಳೂರಿನ ಹೋಟೆಲ್‌ನಲ್ಲಿರುವುದನ್ನು ಉಲ್ಲೇಖಿಸಿದ ನ್ಯಾಯಪೀಠ, 'ಈ 16 ಶಾಸಕರು ವಿಶ್ವಾಸಮತ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಬಯಸಿದಲ್ಲಿ ಅವರಿಗೆ ಕರ್ನಾಟಕ ಹಾಗೂ ಮಧ್ಯಪ್ರದೇಶ ಪೊಲೀಸ್ ಮಹಾನಿರ್ದೇಶಕರು ಭದ್ರತೆ ಒದಗಿಸಬೇಕು' ಎಂದು ತಾಕೀತು ಮಾಡಿತು. ಶುಕ್ರವಾರದ ಅಧಿವೇಶನ ಕೇವಲ ವಿಶ್ವಾಸಮತದ ಒಂದಕಿ ಕಾರ್ಯಸೂಚಿ ಹೊಂದಿರಬೇಕು ಎಂಬ ಸೂಚಿಸಿತು.

### ಮಧ್ಯಪ್ರದೇಶ ಬಲಾಬಲ

| | |
|---|---|
| ಒಟ್ಟು | 230 |
| ರಾಜೀನಾಮೆ ನೀಡಿದ ಕಾಂಗ್ರೆಸ್ಸಿಗರು | 22 |
| ಖಾಲಿ | 2 |
| ಬಹುಮತಕ್ಕೆ | 112 |
| ಕಾಂಗ್ರೆಸ್+ | 99 |
| ಬಿಜೆಪಿ | 107 |

### ವಿಶ್ವಾಸಮತಕ್ಕೂ ಮೊದಲೇ ಸಿಎಂ ರಾಜೀನಾಮೆ?

ಭೋಪಾಲ್: ವಿಶ್ವಾಸ ಮತಕ್ಕೆ ಸುಪ್ರೀಂ ಸೂಚನೆ ಬೆನ್ನಲ್ಲೇ, ಸಿಎಂ ಕಮಲ್‌ನಾಥ್ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಪತ್ರಿಕಾಗೋಷ್ಠಿ ಕರೆದಿದ್ದಾರೆ. ಹೀಗಾಗಿ ವಿಶ್ವಾಸ ಮತ ಯಾಚನೆ ಮಾಡದೇ ರಾಜೀನಾಮೆಗೆ ನೀಡಲಿದ್ದಾರೆ ಎನ್ನಲಾಗುತ್ತಿದೆ.